



ಹೆಸರು ಮಾಡಿರುವ 'ಗೋಲ್ಡ್‌ಮ್ಯಾನ್ ಸಾಚ್ಸ್' ಸಮೂಹದ ಪ್ರಕಾರ, ಮುಂದಿನ ದಶಕದಲ್ಲಿ ಯಾಂತ್ರಿಕ ಬುದ್ಧಿಮತ್ತೆ ಬಳಕೆಯಿಂದಾಗಿ ವಿಶ್ವದ ಜಿಡಿಪಿ ಶೇ. 7ರಷ್ಟು ಹೆಚ್ಚಾಗುತ್ತದೆ. ಅಮೆರಿಕದ ಮೂರನೇ ಎರಡರಷ್ಟು ಉದ್ಯೋಗಗಳ ಮೇಲೆ ಯಾಂತ್ರಿಕ ಬುದ್ಧಿಮತ್ತೆಯ ಪರಿಣಾಮ ಸ್ಪಷ್ಟವಾಗಿ ಗೋಚರಿಸಲಿದೆ. ಕೆಲವು ಕೆಲಸಗಳು ಈಗಿನ ಕೆಲಸಗಳೊಂದಿಗೆ ಸೇರಿಕೊಳ್ಳುತ್ತವೆ, ಇನ್ನು ಕೆಲವು ಹೊಸ ಕೆಲಸಗಳು ಹುಟ್ಟಿಕೊಳ್ಳಲಿವೆ ಎಂದು 'ಗೋಲ್ಡ್‌ಮ್ಯಾನ್ ಸಾಚ್ಸ್' ಸ್ಪಷ್ಟ ಚಿತ್ರ ನೀಡಿದೆ.

ಚಾಟ್ ಜಿಪಿಟಿ ಮಾರುಕಟ್ಟೆಗೆ ಬಂದು ಆರು ತಿಂಗಳಷ್ಟೇ ಆಗಿದೆ. ಅಷ್ಟರಲ್ಲೇ ಯಾಂತ್ರಿಕ ಬುದ್ಧಿಮತ್ತೆ ಮಾರುಕಟ್ಟೆ ಆಕ್ರಮಿಸಲು ಕಾತರಿಸುತ್ತಿರುವ 'ಆಲ್ಫಾಬೆಟ್ ಇಂಕ್' (ಗೂಗಲ್‌ನ ಮಾತೃ ಸಂಸ್ಥೆ), 'ಮೆಟಾಪ್ಲಾಟ್ ಫಾರ್ಮ್ಸ್ ಇಂಕ್' ಮತ್ತು 'ಮೈಕ್ರೊಸಾಫ್ಟ್ ಕಾರ್ಪೊರೇಷನ್'ಗಳು ಜಿದ್ದಿಗೆ ಬಿದ್ದಿವೆ. ಎಲ್ಲ ಕಂಪನಿಗಳು ತಮ್ಮ ಸಾಮರ್ಥ್ಯಕ್ಕನುಸಾರವಾಗಿ ಯಾಂತ್ರಿಕ ಬುದ್ಧಿಮತ್ತೆ ಉದ್ಯಮಕ್ಕೆ ಕೊಡುಗೆ ನೀಡಲಿವೆ. ಆದರೆ ಯಾಂತ್ರಿಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನದ ಉಪಯೋಗ ಒಳಿತಿಗೋ ಕೆಡುಕಿಗೋ ಎಂಬ ಚಿದಂಬರ ಪ್ರಶ್ನೆಗೆ ಉತ್ತರಿಸುವವರು ಯಾರು?

ಚಾಟ್ ಜಿಪಿಟಿಗಿಂತ ಮುಂಚೆ ಇನ್‌ಸ್ಟ್ರಕ್ಟ್ ಜಿಪಿಟಿ ಇತ್ತು. ಹಂತ ಹಂತವಾಗಿ ಸುಧಾರಿತ ರೂಪದಲ್ಲಿ ಮಾರುಕಟ್ಟೆಗೆ ಬಂದಿರುವ ಚಾಟ್ ಜಿಪಿಟಿ–4 ಮನುಷ್ಯ ಮಾಡಬಹುದಾದ ಅಕಡೆಮಿಕ್ ಕೆಲಸಗಳನ್ನು ತಾನೇ ಮಾಡಿ ಮುಗಿಸುತ್ತದೆ. ವಿದ್ಯಾರ್ಥಿ–ಶಿಕ್ಷಕರಿಗಂತೂ ಕೇಳಿದ್ದನ್ನು ಕೊಡುವ ಕಾಮಧೇನುವೆನಿಸಿದೆ. ಚಿತ್ರ, ಪ್ರಬಂಧ, ಸಲಹೆ, ವಿಡಿಯೊ, ಪಜಲ್, ಕಸ್ಟಮರ್ ಸಪೋರ್ಟ್, ಪ್ರಾಜೆಕ್ಟ್ ರಿಪೋರ್ಟ್, ರಜೆ ಪತ್ರ, ರಾಜೀನಾಮೆ ಪತ್ರ, ಬ್ಯಾಲೆನ್ಸ್ ಶೀಟ್, ಆಡಿಟ್ ರಿಪೋರ್ಟ್, ಲ್ಯಾಬ್ ಅನಾಲಿಸಿಸ್ ರಿಪೋರ್ಟ್, ಔಷಧಿ ಪ್ರಿಸ್ಕ್ರಿಪ್ಷನ್, ಷೇರು ಮಾರುಕಟ್ಟೆಯ ಪ್ರೆಡಿಕ್ಷನ್, ಕ್ವಿಜ್, ಎಂಸಿಕ್ಯು ಆನ್ಸರಿಂಗ್, ವೆಲ್‌ನೆಸ್ ಸಲಹೆ, ಭಾಷಾಂತರ, ಅಡುಗೆ ರೆಸಿಪಿ, ಕಾರ್ ವಾಶಿಂಗ್ – ದೈನಂದಿನ ಜೀವನದ ಬಹುತೇಕ ಚಟುವಟಿಕೆಗಳ ಕುರಿತು ಶೇ. 95ರಷ್ಟು ಸರಿಯಾದ ಮಾಹಿತಿ ನೀಡುವ ಕ್ಷಮತೆ ಪಡೆದಿವೆ.

## ಆತಂಕದ ಬಿರುಗಾಳಿ

ಇಂದಿನ ಜನರೇಟಿವ್ ಎಐ ಉತ್ಪಾದಿಸಿದ ಯಾಂತ್ರಿಕ ಬುದ್ಧಿಮತ್ತೆಗೆ ಮೂಲ ಸಂಪನ್ಮೂಲ ಒದಗಿಸಿದ್ದು 'ನ್ಯೂರಲ್ ನೆಟ್‌ವರ್ಕ್'ಗಳು. ಇದು ಮನುಷ್ಯನ ಮೆದುಳಿನ ನರಕೋಶಗಳು ಹೇಗೆ ಒಂದಕ್ಕೊಂದು ಪೂರಕವಾಗಿದ್ದುಕೊಂಡು ಕೆಲಸ ಮಾಡುತ್ತವೆಯೋ ಹಾಗೆಯೇ ಅಲ್ಗೊರಿದಂ ಆಧಾರಿತ ನೆಟ್‌ವರ್ಕ್‌ಗಳು ಕೆಲಸ ಮಾಡುತ್ತವೆ. ಸದ್ಯಕ್ಕೆ ಏಳು ಬಗೆಯ ಕೃತಕ ನ್ಯೂರಲ್ ನೆಟ್‌ವರ್ಕ್‌ಗಳು ಬಳಕೆಯಲ್ಲಿವೆ. ಲೆಕ್ಕಾಚಾರದೊಂದಿಗೆ ಕಲಿಯುತ್ತ, ಕೆಲಸ ಮಾಡುತ್ತವೆ. ಥೇಟ್ ಮನುಷ್ಯನ ಆಲೋಚನೆ, ನಿರ್ಧಾರಗಳಿಗೆ ಸಮಾನಾಂತರವಾಗಿ ಕೆಲಸ ಮಾಡುವ ಕ್ಷಮತೆ ಪಡೆಯುತ್ತಿವೆ. ಸ್ವಯಂ ಕಲಿಕೆ ಪರಾಕಷ್ಠೆ ತಲುಪಿದರೆ ತನಗೆ ಬೇಕಾದ ನಿರ್ಧಾರ ಕೈಗೊಳ್ಳುವ ಕ್ಷಮತೆ ಯಂತ್ರಕ್ಕೆ ಲಭಿಸಿಬಿಡುತ್ತದೆ. ದೇಶವೊಂದರ ಅಣುಬಾಂಬಿನ ಗೋದಾಮಿಗೆ ಪ್ರವೇಶ ಪಡೆದು 'ಈ ಮನುಷ್ಯ ಅತಿಯಾಗಿ ಆಡುತ್ತಿದ್ದಾನೆ. ಪಾಠ ಕಲಿಸುತ್ತೇನೆ' ಎಂದು ಬಾಂಬು ಸಿಡಿತದ ಸ್ವಿಚ್‌ಗೆ 'ಆನ್' ಎಂದು ಸಂದೇಶ ನೀಡಿಬಿಟ್ಟರೆ, 'ಅಣೆಕಟ್ಟಿನ ಗೇಟ್ ತೆಗೆ' ಎಂದು ನಿರ್ದೇಶಿಸಿದರೆ, ಮಿಸೈಲ್‌ಗಳು ಚಿಮ್ಮಲಿ ಎಂದು ಆಜ್ಞೆ ಮಾಡಿದರೆ? ಅಬ್ಬಬ್ಬಾ! ಇದು ಕೊನೆ ಮೊದಲಿಲ್ಲದ ಅಪಾಯಕ್ಕೆ ಆಹ್ವಾನ ನೀಡಿದಂತೆ ಎಂದು ಗೊತ್ತಾದ ದಿನದಿಂದ ಅದನ್ನು ಸೃಷ್ಟಿಸಿದವರ ನಿದ್ದೆ ಹಾರಿಹೋಗಿದೆ. ಇದರ ಬಗ್ಗೆ ತುಂಬಾ ಕೆಲಸ ಮಾಡಿದ್ದ ಜೆಫ್ರಿ, ಕಳೆದ ಮಾರ್ಚ್ ತಿಂಗಳಿನಲ್ಲಿ ಸಾವಿರಕ್ಕೂ ಹೆಚ್ಚು ಯಾಂತ್ರಿಕ ಬುದ್ಧಿಮತ್ತೆ ತಜ್ಞರನ್ನು ಕಂಡು, ಮನವಿ ಪತ್ರ ಸಿದ್ಧಪಡಿಸಿ, ಸಹಿ ಹಾಕಿ, ಹಾಕಿಸಿ ಇನ್ನಾರು ತಿಂಗಳು ಯಾಂತ್ರಿಕ ಬುದ್ಧಿಮತ್ತೆಯ ಕೆಲಸಗಳನ್ನು ನಿಲ್ಲಿಸಲು ನಿರ್ಧರಿಸಿ, ಜಗತ್ತಿನ ಎಲ್ಲ ತಜ್ಞರೂ ಇದನ್ನು ಪಾಲಿಸಬೇಕು ಎಂದು ಕೇಳಿಕೊಂಡಿದ್ದಾರೆ. 'ಈಗ ಲಭ್ಯವಿರುವ ಯಾಂತ್ರಿಕ